ಶುಶ್ರೂಷೆ ಮಾಡಿ ಕಾಲು ಊನವಾಗಿದ್ದು ವೈಕಲ್ಯ ಶಾಶ್ವತ ಉಳಿಯಬಹುದು ಎಂದಿದ್ದಾರೆ. ಗೆಜ್ಜೆ ಎಷ್ಟು ಚಂದವಿದ್ದರೇನು? ಹೆಜ್ಜೆನೇ ಇಲ್ಲವೆಂದ ಮೇಲೆ ಗೆಜ್ಜೆಗೆಲ್ಲಿ ನಾದ? ಬದುಕು ಕಷ್ಟ. ಆದರೂ ಸ್ವಯಂವರ ಮಾಡಲು ತೀರ್ಮಾನಿಸಿದ್ದಾರೆ. ಎಲ್ಲರೂ ಸಾಲಾಗಿ ಬಂದು ತಮ್ಮ ಉಡುಗೊರೆ ಕೊಟ್ಟು ಮುಖದ ಚಂದ ಮುಕ್ಕಾಗದ ಚೆಲುವಿಯನ್ನು ಕೈ ಹಿಡಿಯುವ ಅದೃಷ್ಟಶಾಲಿ ಯಾರೆಂದು ಸ್ವಯಂ ಪರೀಕ್ಷಿಸಿಕೊಳ್ಳಿ' ಎಂದಿತು. ಆಗ ಅರ್ಧದಷ್ಟು ಕೋತಿಗಳು ಅಯ್ಯೋ.. ಕುಂಟು ಕೋತಿ ಕಟ್ಟಿಕೊಂಡು ಲಗಾಟು ಹೊಡೆಯಲೇನು? ಬೇಡವೆಂದು ಹೊರಟು ಹೋದವು. ಅದರೆ ಇನ್ನು ಕೆಲವು ಕಾಲು ಉಳುಕಿದರೆ ಚೆಲುವು ಉಳುಕಿದೆಯೇ? ಎಂದು ನಿಂತವು.

ತಕ್ಷಣ ಕೆಲವರು ತಮ್ಮ ಉಡುಗೊರೆಯನ್ನು ಬದಲಾಯಿಸಿ ತಂದರು. ಕಾಲು ಉಳುಕಿದೆ ಎಂದು ಕೆಲವರು ಕೋಲನ್ನು ಕೆಲವರು ಪೆಟ್ಟಿಗೆಯನ್ನು ಕೆಲವು ಮೇಣೆಯನ್ನು ಕೆಲವು ಔಷಧಗಳನ್ನು ತಂದವು. ಒಂದೊಂದು ಕೋತಿಯೂ ಸುಂದರಿ ಕೋತಿಯ ಮುಂದೆ ನಿಂತು ತಾವು ತಂದ ಉಡುಗೊರೆಯನ್ನು ಕೊಟ್ಟವು. ಅದರೆ ಸುಂದರಿ ಕೋತಿಗೆ ಇವರಾರ ಉಡುಗೊರೆಯೂ ಇಷ್ಟವಾಗಲಿಲ್ಲ. ಕೆಲವರಂತೂ ಹತ್ತಾರು ಕೋಲುಗಳನ್ನು ಉಡುಗೊರೆ ಕೊಟ್ಟರು.

ಕೊನೆಯದಾಗಿ ಮಕ್ಕು ಎಂಬ ಕುಂಟು ಕೋತಿ ನಿಂತಿತ್ತು. ಕೈಯಲ್ಲಿ ಯಾವ ಉಡುಗೊರೆಯೂ ಇಲ್ಲ.. ಅದನ್ನು ಕಂಡ ಉಳಿದ ಕೋತಿಗಳು ಅಪಹಾಸ್ಯ ಮಾಡಿ ನಕ್ಕು ಬೆಲೆ ಬಾಳುವ ಉಡುಗೊರೆಯನ್ನೇ ಕಣ್ಣೆತ್ತಿ ನೋಡದ ಸುಂದರಿ ಬರಿಗೈಲಿ ಬಂದ ಒಂಟಿ ಕಾಲಿನ ನಿನ್ನಂತ ಕುಂಟನನ್ನು ಮದುವೆಯಾಗುವುದೇ? ಎಂದು ಗೇಲಿ ಮಾಡಿದವು. ಆಗ ಅಲ್ಲಿದ್ದ ಕುಂಟು ಕೋತಿಗೆ ಸುಂದರಿ 'ಏನು..? ನೀನು ಯಾವ ಉಡುಗೊರೆ ಇಲ್ಲದೇ ಬಂದಾ? ಸ್ಪರ್ಧೆಯ ನಿಯಮಗೊತ್ತು ತಾನೆ?' ಎಂದಿತು. ಅದಕ್ಕೆ ಕುಂಟ ಮಕ್ಕು 'ನಿಮಗೆ ಬೇಕಾಗಿರುವುದು ಕೋಲೂ ಅಲ್ಲ. ಉಡುಗೊರೆಯೂ ಅಲ್ಲ. ಒಂಟಿ ಕಾಲಿನ ಕಷ್ಟ ಏನೆಂದು ನನಗೆ ಗೊತ್ತು. ಅದಕ್ಕೆ ಇರುವ ಈ ಒಂದೇ ಕಾಲು ನಿಮಗೆ ಊರುಗೋಲು. ಜೀವನ ಪರ್ಯಂತ ನಿಮಗೆ ಊರು ಗೋಲಾಗಿ ಕೈ ಹಿಡಿದು ನಡೆಸುವೆ. ಅನುಕಂಪ ಬೇಡ ಅನುಬಂಧ ಬೇಕು. ಅದಕ್ಕೆ ನಿಮಗೆ ಊರುಗೋಲಾಗಿ ನಾನಿರುವಾಗ ಬೇರೆ ಉಡುಗೊರೆ ತರಲಿಲ್ಲ' ಅಂತು.

ತಕ್ಷಣ ಸುಂದರಿ ಕೋತಿ ಟಣ್ಣನೆ ಜಿಗಿಯಿತು. ಪಾಪ ಮಕ್ಕು ಮೊದಲೇ ಕಾಲು ಊನವಾಗಿದೆ, ಸುಂದರಿ ಕೋತಿಗೆ ಏನಾಯಿತೆಂದು ಗಾಬರಿಯಿಂದ ಎದ್ದು ಹಿಡಿಯಲು ಹೋಯಿತು. ಆಶ್ಚರ್ಯ ಸುಂದರಿ ಕೋತಿ ಸರಿಯಾಗಿ ಎದ್ದು ನಿಂತು ವಯ್ಯಾರದಿಂದ ಮುಂದೆ ಬಂತು. ಅಗ ಕುಂಟು ಕೋತಿಗೆ ಸುಂದರಿ ಕೋತಿಯು ಊನಗೊಂಡ ಕಾಲಿಗೆ ಬೇಕಾಗಿರುವುದು ಕೋಲಲ್ಲ. ಕೈ ಹಿಡಿದು ನಡೆಸುವ ಮನಸ್ಸು. ಈ ಮನಸ್ಸು ನಿನ್ನಲ್ಲಿ ಊನವಾಗಿಲ್ಲ. ಅದಕ್ಕೆ ನನ್ನ ಸ್ವಯಂವರದ ಮಧುಮಗ ನೀನೇ ಎಂದು ಹಾರ ಹಾಕಿತು. ಅಲ್ಲಿದ್ದ ಎಲ್ಲ ಪ್ರಾಣಿ ಪಕ್ಷಿಗಳು ಸುಂದರಿ ಕೋತಿಯೇ ನಿಜವಾದ ಸುಂದರಿ. ಮುಖ ಮಾತ್ರ ಸುಂದರವಾಗಿಲ್ಲ. ಹೃದಯವು ಸುಂದರವೆಂದು ಚಪ್ಪಾಳೆ ತಟ್ಟಿದವು. ■



# ಚಿಟ್ಟೆ ಹೆಜ್ಜೆ

ಹಲವು ಬಣ್ಣ ಹೊದ್ದುಕೊಂಡ
ಚಂದ ಚಿಟ್ಟೆ ನಾನು!
ಒಲವಿನಿಂದ ನನ್ನ ಕಥೆಯ
ನೀವು ಕೇಳ್ವಿರೇನು!!

ಮೊಟ್ಟೆಯಿಟ್ಟು ಹೋದಳಮ್ಮ
ಮರಳಿ ಬರಲೆ ಇಲ್ಲ!
ಮುದ್ದು ಮಾಡಿ ಬೆಳೆಸಲಿಕ್ಕೆ
ನನಗೆ ಯಾರು ಇಲ್ಲ!!

ಯಾರ ಬಳಿಯು ಬೇಡಲಿಲ್ಲ
ನೀಡಿರೆಂದು ನಾನು!
ಸ್ವಂತ ಬಲದಿ ಬೆಳೆದು ನಿಂದೆ
ನಂಬಬಲ್ಲಿರೇನು!!

ಕೋಶದೊಳಗೆ ಕುಳಿತೆ ನಾನು
ಕನಸು ಹೆಣೆಯುತಿದ್ದೆ!
ಕಂಡ ಕನಸು ನನಸು ಮಾಡೆ
ಸತತ ದುಡಿಯುತಿದ್ದೆ!!

ಹುಟ್ಟಿನಿಂದ ಹುಳುವು ನಾನು
ಕಷ್ಟಪಟ್ಟು ಬೆಳೆದೆ!
ಚಿಟ್ಟೆಯಾಗಿ ಹಾರಿ ಬಂದು
ನಿಮ್ಮ ಮನಸು ಸೆಳೆದೆ!!

ಬಣ್ಣನೋಡಿ ಕರುಬಬೇಡಿ
ಶ್ರಮದ ಬದುಕ ನೋಡಿ!
ಶ್ರದ್ಧೆಯಿಂದ ದುಡಿದು ನೀವು
ಚಂದ ಬದುಕ ಮಾಡಿ!!

■ ಮಾನಸ ಕೀಳಂಬಿ



# ಅಪರೂಪದ ಗಿಳಿ

ಗಿಳಿ ಪ್ರಭೇದಕ್ಕೆ ಸೇರುವ ಅಪರೂಪದ ಹಕ್ಕಿ 'ಮಕವ್'. ಆಕರ್ಷಕ ಪುಕ್ಕದಿಂದ ಗಮನ ಸೆಳೆಯುವ ಇದನ್ನು 'ಬ್ಲ್ಯೂ ಮಕವ್', ಗೋಲ್ಡ್ ಮಕವ್' ಎಂದೂ ಕರೆಯುತ್ತಾರೆ.

ನೀಲಿ, ಕಪ್ಪು–ಬಿಳಿ ಮತ್ತು ಚಿನ್ನದ ಬಣ್ಣದ ಪುಕ್ಕದಿಂದ ದೇಹ ಆವರಿಸಿರುತ್ತದೆ. ರೆಕ್ಕೆಗಳು, ಬಾಲ ಮತ್ತು ಬೆನ್ನಿನ ಭಾಗ ನೀಲಿಯಾಗಿದ್ದರೆ, ಕತ್ತು ಮತ್ತು ಉದರ ಹಳದಿಯಾಗಿದೆ. ರೆಕ್ಕೆಗಳ ಒಳಭಾಗ ಹಳದಿ ಮಿಶ್ರಿತ ಹಸಿರು, ಕೊಕ್ಕು ಕಪ್ಪಿದೆ. ನೆತ್ತಿ ತಿಳಿ ಹಸಿರು. ದೇಹದ ಬಣ್ಣ ಮತ್ತು ತಳಿಗೆ ಅನುಗುಣವಾಗಿ ಭಿನ್ನ ಎನಿಸುತ್ತದೆ. ಅಗಲವಾದ ರೆಕ್ಕೆಗಳನ್ನು ಹೊಂದಿರುವುದರಿಂದ ಹಾರಾಡುವಾಗ ಆಕರ್ಷಕವಾಗಿ ಕಾಣಿಸುತ್ತದೆ. ಮುಖದ ಭಾಗ ಕಪ್ಪು–ಬಿಳಿ ಬಣ್ಣದಲ್ಲಿದ್ದು, ಅಲ್ಲಲ್ಲಿ ಮೂಡಿರುವ ಗೆರೆಗಳು ಇದರ ಸೌಂದರ್ಯಕ್ಕೆ ಮತ್ತಷ್ಟು ಮೆರುಗು ನೀಡುತ್ತವೆ. ದಕ್ಷಿಣ ಆಫ್ರಿಕಾ, ಅಮೆರಿಕ, ಪೆರು, ಬ್ರೆಜಿಲ್ ಮತ್ತು ವೆನಿಜುವೆಲಾ ದೇಶಗಳಲ್ಲಿ ಇದರ ಸಂತತಿ ಹೆಚ್ಚಿದೆ.

(ಆಧಾರ)